# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮೇ 31, 2021

ಸಂಪುಟ : 48 ಸಂಚಿಕೆ : 17 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಆಕ್ಸಿಜನ್ ಬೇಡಿಕೆ ತೀವ್ರ ಇಳಿಕೆ

### ಕೈಗಾರಿಕೆಗಳ ಆಕ್ಸಿಜನ್ ಬಳಕೆ ಅನುಮತಿಗೆ ಸಿದ್ಧತೆ

ನವದೆಹಲಿ, ಮೇ 30 – ದೇಶದಲ್ಲಿ ಸಕ್ರಿಯ ಕೊರೊನಾ ಪ್ರಕರಣಗಳು ಇಳಿಮುಖವಾಗುತ್ತಿರುವಂತೆಯೇ ಕೈಗಾರಿಕೆಗಳು ಲಿಕ್ವಿಡ್ ಆಕ್ಸಿಜನ್ ಬಳಸದಂತೆ ಹೇರಲಾಗಿದ್ದ ನಿರ್ಬಂಧವನ್ನು ಸಡಿಲಿಸಲು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ.

ಕೊರೊನಾ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿರುವಂತೆಯೇ, ಪ್ರತಿದಿನದ ಆಕ್ಸಿಜನ್ ಬೇಡಿಕೆ ತಿಂಗಳ ಆರಂಭದಲ್ಲಿ 9 ಸಾವಿರ ಟನ್ ಇದ್ದದ್ದು, ಈಗ 5,600 ಟನ್‌ಗಳಿಗೆ ಇಳಿಕೆಯಾಗಿದೆ.

ಕೇಂದ್ರ ಸರ್ಕಾರ ಏಪ್ರಿಲ್ 25ರಂದು ಕೈಗಾರಿಕೆಗಳು ದ್ರವ ಆಕ್ಸಿಜನ್ ಬಳಸದಂತೆ ಆದೇಶ ಹೊರಡಿಸಿತ್ತು. ದೇಶಾದ್ಯಂತದ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಕೊರೊನಾ ರೋಗಿಗಳಿಗೆ ಸಮರ್ಪಕ ಆಕ್ಸಿಜನ್ ದೊರಕುವಂತಾಗಲು ಈ ಕ್ರಮ ತೆಗೆದುಕೊಳ್ಳಲಾಗಿತ್ತು.

ಈಗ ಆಕ್ಸಿಜನ್ ಬೇಡಿಕೆ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ, ಆದ್ಯತೆಯ ಮೇಲೆ ಕೆಲವು ಕೈಗಾರಿಕೆಗಳ ಮೇಲಿನ ನಿರ್ಬಂಧವನ್ನು ತೆರವುಗೊಳಿಸುವ ಬಗ್ಗೆ ಸರ್ಕಾರ 2-3 ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆಕ್ಸಿಜನ್ ಬೇಡಿಕೆ ಇಳಿಕೆಯಾಗುವುದು ಇದೇ ರೀತಿ ಮುಂದುವರೆಯಲಿದೆ ಎಂಬ ಅಂದಾಜಿಗೆ. ಸೋಂಕು ಹಾಗೂ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಹೀಗಾಗಿ ಕೈಗಾರಿಕೆಗಳಿಗೆ ವಿಧಿಸಲಾಗಿರುವ ನಿರ್ಬಂಧ ತೆರವುಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

(3ನೇ ಪುಟಕ್ಕೆ)

# ಅಂತ್ಯಕ್ರಿಯೆಗಾಗಿ 3 ಹಂತದ ವ್ಯವಸ್ಥೆ

### ಸುಪ್ರೀಂ ಕೋರ್ಟ್‌ನಲ್ಲಿ ಕೊರೊನಾದಿಂದ ಸಾವನ್ನಪ್ಪಿದವರ ಗೌರವಯುತ ಅಂತ್ಯಕ್ರಿಯೆಗಾಗಿ ಅರ್ಜಿ

ನವದೆಹಲಿ, ಮೇ 30 – ಕೊರೊನಾದಿಂದ ಮೃತರ ಗೌರವಪೂರ್ವಕ ಅಂತ್ಯಕ್ರಿಯೆಗಾಗಿ ಕೇಂದ್ರ ಸರ್ಕಾರ ಹಾಗೂ ಇತರರು ಮೂರು ಹಂತದ ವ್ಯವಸ್ಥೆ ರೂಪಿಸಬೇಕೆಂದು ನಿರ್ದೇಶನ ನೀಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದೆ. ಬಿಹಾರ ಹಾಗೂ ಉತ್ತರ ಪ್ರದೇಶಗಳಲ್ಲಿ ಶವಗಳು ತೇಲಿ ಬಂದ ವರದಿಗಳ ಹಿನ್ನೆಲೆಯಲ್ಲಿ ಈ ಅರ್ಜಿ ದಾಖಲಿಸಲಾಗಿದೆ.

ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳ ಹಂತಗಳಲ್ಲಿ ಮೂರು ಹಂತದ ಸಮಿತಿಗಳನ್ನು ರಚಿಸಬೇಕು. ಈ ಸಮಿತಿಗಳು ಮೃತರ ಅಂತ್ಯಕ್ರಿಯೆ ಕುರಿತು ನಿಗಾ ವಹಿಸಬೇಕು ಎಂದು ವಿನೀತ್ ಜಿಂದಾಲ್ ಎಂಬುವವರು ಮನವಿ ಮಾಡಿಕೊಂಡಿದ್ದಾರೆ.

ಶವಗಳನ್ನು ನದಿಗಳಲ್ಲಿ ತೇಲಿ ಬಿಡುವುದರಿಂದ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತದೆ. ಇದರಿಂದ ರೋಗಗಳು ಹರಡುವ ಅಪಾಯವೂ ಇದೆ ಎಂದವರು ಅರ್ಜಿಯಲ್ಲಿ ಹೇಳಿದ್ದಾರೆ.

(3ನೇ ಪುಟಕ್ಕೆ)

## ಜೂನ್‌ನಲ್ಲಿ 12 ಕೋಟಿ ಲಸಿಕೆ : ಕೇಂದ್ರ ಆರೋಗ್ಯ ಸಚಿವಾಲಯ

ನವದೆಹಲಿ, ಮೇ 30 – ಜೂನ್ ತಿಂಗಳಲ್ಲಿ 12 ಕೋಟಿ ಕೊರೊನಾ ವೈರಸ್ ಲಸಿಕೆಗಳು ಲಭ್ಯವಾಗಲಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮೇ ತಿಂಗಳಲ್ಲಿ 794 ಕೋಟಿ ಡೋಸ್ ಲಸಿಕೆಗಳು ಲಭ್ಯವಾಗಿದ್ದವು. ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವಾಲಯ, ರಾಜ್ಯಗಳು ಲಸಿಕೆ ಬಳಸುವ ವಿಧಾನ, ಜನಸಂಖ್ಯೆ ಹಾಗೂ ಲಸಿಕೆ ಪೋಲಾಗುವ ಪ್ರಮಾಣ ಪರಿಗಣಿಸಿ ವಿತರಣೆ (3ನೇ ಪುಟಕ್ಕೆ)

## ಶೇರಾಪುರ ವಸತಿ ಕಾಮಗಾರಿ 6 ತಿಂಗಳಲ್ಲಿ ಪೂರ್ಣ: ಸೋಮಣ್ಣ



ಹರಿಹರ ಶೇರಾಪುರ ಬಡಾವಣೆಯಲ್ಲಿ 50 ಎಕರೆ ವಸತಿ ಪ್ರದೇಶ ಸ್ಥಳ ಪರಿಶೀಲಿಸಿದ ವಸತಿ ಸಚಿವ ವಿ.ಸೋಮಣ್ಣ

ಹರಿಹರ, ಮೇ 30- ರಾಜ್ಯ ಗೃಹ ಮಂಡಳಿ ವತಿಯಿಂದ ನಗರದ ಶೇರಾಪುರ ಬಡಾವಣೆಯ 50 ಎಕರೆ ಪ್ರದೇಶದಲ್ಲಿ ಸುಮಾರು 650 ನಿವೇಶನ ನಿರ್ಮಾಣ ಮಾಡಲು ಎಲ್ಲಾ ರೀತಿಯ ಸಿದ್ದತೆ ನಡೆಸಿದ್ದು, ಕಾಮಗಾರಿ ಇನ್ನು 6 ತಿಂಗಳಲ್ಲಿ ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿದೆ ಎಂದು ವಸತಿ ಸಚಿವರಾದ ವಿ.ಸೋಮಣ್ಣ ತಿಳಿಸಿದರು.

ನಗರದ ಶೇರಾಪುರ ಬಡಾವಣೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸುಮಾರು 50 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ವಸತಿ ಪ್ರದೇಶದ ಸ್ಥಳ ಪರಿಶೀಲಿಸಿ ಅವರು ಮಾತನಾಡಿದರು.

ಈ ಪ್ರದೇಶದಲ್ಲಿ 20x30 40x30 60x40 ಅಳತೆಯ ಸುಮಾರು 650 ನಿವೇಶನವನ್ನು ಹಂಚಿಕೆ ಮಾಡಲಾಗುವುದು. ಈಗಾಗಲೇ 33ಸಾವಿರ ಅರ್ಜಿಗಳು ಬಂದಿವೆ. ಇದರಲ್ಲಿ 20x30 ನಿವೇಶನಕ್ಕೆ ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಅತಿ ಬಡವರಿಗೆ ಶೇ. 50 ರಷ್ಟು ಕಡಿಮೆ ದರದಲ್ಲಿ ವಿತರಣೆ ಮಾಡಲಾಗುತ್ತದೆ ಎಂದರು. ಕಾನೂನು ಚೌಕಟ್ಟಿನಲ್ಲೇ

(3ನೇ ಪುಟಕ್ಕೆ)

## ದೇಶಕ್ಕೆ ಶ್ರೇಷ್ಠ ಪ್ರಧಾನಿಯನ್ನು ನೀಡಿದ ಕೀರ್ತಿ ಬಿಜೆಪಿಯದ್ದು



ದಾವಣಗೆರೆ, ಮೇ 30- ನರೇಂದ್ರ ಮೋದಿ ಅವರಂತಹ ಶ್ರೇಷ್ಠ ಪ್ರಧಾನಿಯನ್ನು ದೇಶಕ್ಕೆ ನೀಡಿದ ಕೀರ್ತಿ ಬಿಜೆಪಿ ಪಕ್ಷದ ಹೆಗ್ಗಳಿಕೆ ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಬಣ್ಣಿಸಿದರು.

ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಯಶಸ್ವಿಯಾಗಿ ಏಳು ವರ್ಷಗಳನ್ನು ಪೂರೈಸಿದ ಸವಿನೆನಪಿಗಾಗಿ ಮಹಾನಗರ ಪಾಲಿಕೆಯ 33 ನೇ ವಾರ್ಡ್‌ನಲ್ಲಿ ಇಂದು ಏರ್ಪಾಡಾಗಿದ್ದ ಕೋವಿಡ್ ಸಂಬಂಧಿತ ವಿವಿಧ ಸಮಾಜಮುಖಿ ಸೇವಾ ಚಟುವಟಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ದೇಶದಲ್ಲಿ ಹಲವಾರು ಗಮನಾರ್ಹ ಬದಲಾವಣೆಗಳಾಗಿವೆ. ನಮ್ಮ ದೇಶದ ಕೀರ್ತಿ ಜಗತ್ತಿನಾದ್ಯಂತ ಪಸರಿಸಿದೆ. ಭಾರತ ದೇಶ ವಿಶ್ವದಲ್ಲಿ ತಲೆಯೆತ್ತಿ ನಿಲ್ಲುವಂತೆ ಮಾಡಿದ ಕೀರ್ತಿ ನರೇಂದ್ರ ಮೋದಿಯವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಆರಂಭದಲ್ಲಿ ಜನರು ಲಸಿಕೆ ಪಡೆಯಲು ಉದಾಸೀನತೆ ತೋರಿ ಸಿದ್ದೇ ಇಂದು ಲಸಿಕೆಗಾಗಿ ಹಾಹಾಕಾರ ಪಡುವಂತಾಗಿದೆ. ಆದರೂ ಸರ್ಕಾರ ದಿಂದ (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 8 ಸಾವು, 698 ಪಾಸಿಟಿವ್

ದಾವಣಗೆರೆ, ಮೇ 30- ಜಿಲ್ಲೆಯಲ್ಲಿ ಭಾನುವಾರ 698 ಜನರಲ್ಲಿ ಕೊರೊನಾ ಸೋಂಕಿ ದೃಢಪಟ್ಟಿದ್ದು, 8 ಜನರು ಸಾವನ್ನಪ್ಪಿದ್ದು, 853 ಜನರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 338, ಹರಿಹರ 72, ಜಗಳೂರು 38, ಚನ್ನಗಿರಿ 137, ಹೊನ್ನಾಳಿ 100 ಹಾಗೂ ಹೊರ ಜಿಲ್ಲೆಯ 13 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ದಾವಣಗೆರೆ (3ನೇ ಪುಟಕ್ಕೆ)





# ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ. ಜಿಲ್ಲೆ ಶಾಮನೂರು ಗ್ರಾಮದ ವಾಸಿ
ದಿ. ಶ್ರೀ ನಿಟುವಳ್ಳಿ ನಾಗಪ್ಪನವರ ಮಗನಾದ
ಶ್ರೀ ಶಿವಾನಂದಪ್ಪ ಎನ್. ಶ್ರೀಮತಿ ಪದ್ಮ
ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 12.05.2021ನೇ ಬುಧವಾರ
ಮಧ್ಯರಾತ್ರಿ 12.20ಕ್ಕೆ ನಮ್ಮ ಪೂಜ್ಯ ತಮ್ಮನವರಾದ

## ಶಾಮನೂರು ಶ್ರೀ ನಿಟುವಳ್ಳಿ ಬಸವರಾಜಪ್ಪ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 01.06.2021ನೇ ಮಂಗಳವಾರ ಬೆಳಿಗ್ಗೆ 10.45ಕ್ಕೆ
ಮೃತರ ಸ್ವಗೃಹ ಶಾಮನೂರು ಗ್ರಾಮ, ದಾವಣಗೆರೆ ತಾ. ಜಿಲ್ಲೆ ಇಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು
ಕೋರಬೇಕಾಗಿ ವಿನಂತಿ.

ಇಂದ :
ಶ್ರೀಮತಿ ಶ್ರೀ ಎನ್.ಬಿ. ಮಂಜುನಾಥ, ಶ್ರೀಮತಿ ಶ್ರೀ ಎನ್.ಬಿ. ಮಧು,
ಶಾಮನೂರು ಗ್ರಾಮ, ದಾವಣಗೆರೆ ತಾ. ಜಿಲ್ಲೆ
ಮೊ : 8861890444-, 96202 37627

ಇಂತಿ ದುಃಖತಪ್ತರು,
ದಿ. ಶ್ರೀ ಎನ್. ಬಸವರಾಜಪ್ಪನವರ ಪತ್ನಿ ಶ್ರೀಮತಿ ನಾಗರತ್ನ ಹಾಗೂ ಸಹೋದರರು,
ಸಹೋದರಿಯರು ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ನಿಟುವಳ್ಳಿ ವಂಶಸ್ಥರು
ಹಾಗೂ ಬಂಧು-ಮಿತ್ರರು

ವಿ ಸೂ: ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ

# ಪೆರೋಲ್ ಬೇಡ, ಜೈಲೇ ಇರಲಿ

**ಆರೋಗ್ಯ, ಆಹಾರಕ್ಕೆ ಜೈಲೇ ಸೂಕ್ತ ಎಂದ ಉತ್ತರ ಪ್ರದೇಶದ ಬಂಧಿತರು**

ಲಖ್ನೌ, ಮೇ 30 – ಜೈಲಿನಿಂದ ಹೊರ ಬರಲು ಜನರು ತವಕಿಸುತ್ತಾರೆ. ಆದರೆ, ಉತ್ತರ ಪ್ರದೇಶದ ಒಂಭತ್ತು ಬಂಧೀಖಾನೆಗಳ 21 ಖೈದಿಗಳು, ಕೊರೊನಾ ಹಿನ್ನೆಲೆಯಲ್ಲಿ ತಮಗೆ ಜೈಲೇ ಸುರಕ್ಷಿತ ವಾಗಿದ್ದು ಪೆರೋಲ್ ಬೇಡ ಎಂದು ತಿಳಿಸಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಜೈಲು ಶಿಕ್ಷೆಯನ್ನು ತಾತ್ಕಾಲಿಕವಾಗಿ ತಡೆಯುವ ಮೂಲಕ ಪೆರೋಲ್ ನೀಡಿ ಬಿಡುಗಡೆ ಮಾಡಲಾಗುತ್ತಿದೆ. ಆದರೆ, ಘಾಜಿಯಾಬಾದ್, ಗೌತಮ ಬುದ್ಧ ನಗರ, ಮೀರತ್, ಮಹಾರಾಜ ಗಂಜ್, ಗೋರಖ್‌ಪುರ ಹಾಗೂ ಲಖ್ನೌಗಳಲ್ಲಿರುವ 21 ಖೈದಿಗಳು ತಮಗೆ ಬಿಡುಗಡೆ ಬೇಡ ಎಂದು ಮನವಿ ಮಾಡಿಕೊಂಡಿದ್ದಾರೆ ಎಂದು ಜೈಲು ಆಡಳಿತ ಪ್ರಧಾನ ನಿರ್ದೇಶಕ ಆನಂದ ಕುಮಾರ್ ತಿಳಿಸಿದ್ದಾರೆ.

ಪೆರೋಲ್ ಪಡೆದರೆ, ನಂತರ ಜೈಲು ಶಿಕ್ಷೆಯ ಅವಧಿ ಹೆಚ್ಚಾಗುತ್ತದೆ. ಅಲ್ಲದೇ, ಹೊರಗಡೆ ಹೋದರೆ ಜೈಲಿನಲ್ಲಿರುವ ರೀತಿ ಆಹಾರ ಹಾಗೂ ಆರೋಗ್ಯ ಸೇವೆ ಸಿಗದೇ ಇರಬಹುದು ಎಂಬುದು ಖೈದಿಗಳ ಕಳವಳವಾಗಿದೆ.

ಜೈಲುಗಳಲ್ಲಿ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ಜೈಲಿನಿಂದ ಹೊರ ಹೋದ ಮೇಲೆ ಅವರು ಜೀವನಕ್ಕಾಗಿ ಕಷ್ಟಪಡಬೇಕಾಗುತ್ತದೆ ಎಂದು ಕುಮಾರ್ ಹೇಳಿದ್ದಾರೆ.

ಖೈದಿಗಳು ಲಿಖಿತವಾಗಿ ತಮ್ಮ ನಿರ್ಧಾರ ತಿಳಿಸಿರುವುದರಿಂದ, ಅದಕ್ಕೆ ನಾವು ಗೌರವಿಸುತ್ತೇವೆ ಎಂದು ಕುಮಾರ್ ಹೇಳಿದ್ದಾರೆ.

# ದೇಶಕ್ಕೆ ಶ್ರೇಷ್ಠ ಪ್ರಧಾನಿಯನ್ನು ನೀಡಿದ ಕೀರ್ತಿ ಬಿಜೆಪಿಯದ್ದು



**(1ನೇ ಪುಟದಿಂದ)** ವ್ಯವಸ್ಥಿತವಾಗಿ ಲಸಿಕೆಗಳನ್ನು ಸರಬರಾಜು ಮಾಡಲಾಗುತ್ತಿದೆ. ಎಲ್ಲರಿಗೂ ಲಸಿಕೆ ಸಿಗಲಿದೆ. ಸಾರ್ವಜನಿಕರು ತಾಳ್ಮೆ ಕಳೆದುಕೊಳ್ಳದೇ ಲಸಿಕೆಯನ್ನು ಕಡ್ಡಾಯವಾಗಿ ಪಡೆಯಲು ಶಾಸಕರು ಮನವಿ ಮಾಡಿದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ದಾನ ಮತ್ತು ಸೇವೆಯು ಪ್ರಧಾನ ಸ್ಥಾನವನ್ನು ಪಡೆದಿವೆ. ಕೆ.ಎಂ. ಸುರೇಶ್ ಮತ್ತು ಕೆ.ಎಂ. ವೀರೇಶ್ ಸಹೋದರರು ಸಾಮಾಜಿಕ ಕಳಕಳಿಯ ಸೇವಾ ಚಟುವಟಿಕೆಗಳ ಮೂಲಕ ನರೇಂದ್ರ ಮೋದಿಯವರ 7 ವರ್ಷಗಳ ಸಾಧನೆ ಯನ್ನು ಜನರಿಗೆ ತಿಳಿಸುತ್ತಿದ್ದಾರೆ. ಇದು ಇತರ ರಿಗೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿ ಸ್ವಾಮಿ ಮಾತನಾಡಿ, ಕೊರೊನಾ ಸಾಂಕ್ರಾಮಿಕ ರೋಗವನ್ನು ಪ್ರಧಾನಿ ಮೋದಿ ಅವರು ನಿರ್ವಹಿಸಿದ ರೀತಿ ವಿಶ್ವಮಾನ್ಯವಾಗಿದೆ ಎಂದು ಕೊಂಡಾಡಿದರು.

ಕಾರ್ಯಕ್ರಮದ ಆಯೋಜಕರಾದ ಶ್ರೀ ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿಯೂ ಆದ ಬಿಜೆಪಿ ಶಿಕ್ಷಕರ ಪ್ರಕೋಷ್ಠದ ರಾಜ್ಯ ಸಹ ಸಂಚಾಲಕ ಕೆ.ಎಂ. ಸುರೇಶ್ ಮಾತನಾಡಿ, ನರೇಂದ್ರ ಮೋದಿಯವರು ಪ್ರಧಾನಿಗಳಾಗಿ ಏಳು ವರ್ಷ ಅಧಿಕಾರ ನಡೆಸಿದ್ದನ್ನು ವಿಜಯೋತ್ಸಾಹದ ಮೂಲಕ ಆಚರಿಸುವುದರ ಬದಲಾಗಿ ಕೋವಿಡ್ ಸೋಂಕಿತರ ಮನೆಬಾಗಿಲಿಗೆ ಆಹಾರ ವಿತರಣೆ, ಅಗತ್ಯವಿರುವವರಿಗೆ ಆಹಾರ ಧಾನ್ಯಗಳ ಕಿಟ್, ಹಬೆ ಯಂತ್ರ, ಮಾಸ್ಕ್, ಸ್ಯಾನಿಟೈಸರ್ ವಿತರಣೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸುವಂತಾಗ ಬೇಕು ಎಂದು ಆಶಯ ವ್ಯಕ್ತಪಡಿಸಿದರು.

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಕೆ.ಜಿ. ಯಲ್ಲಪ್ಪ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ನಿಟುವಳ್ಳಿಯ ಸರಸ್ವತಿ ನಗರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಉದ್ಯಾನವನ ದಲ್ಲಿ ಸಸಿ ನೆಡುವ ಹಾಗೂ ಮಣಿಕಂಠ ಸರ್ಕಲ್‌ನ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 10 ಸಾವಿರ ರೂ. ಮೌಲ್ಯದ ಕೋವಿಡ್ ಸಂಬಂಧಿತ ಔಷಧಗಳನ್ನು ಉಚಿತವಾಗಿ ನೀಡುವ ಹಾಗೂ 33ನೇ ವಾರ್ಡ್ ಫಲಾನುಭವಿಗಳಿಗೆ ಆಹಾರದ ಕಿಟ್ ಗಳನ್ನು ವಿತರಿಸಲಾಯಿತು.

33ನೇ ವಾರ್ಡಿನ ಪಾಲಿಕೆ ಸದಸ್ಯ ಕೆ.ಎಂ.ವೀರೇಶ್, ಎಸ್. ಮಂಜುನಾಥ್ ನಾಯ್ಕ್, ಪಿ.ಎಸ್.ಬಸವರಾಜ್, ಕ್ರೀಡಾ ಪಟು ಧನ್ಯಕುಮಾರ್, ದೇವಸ್ಥಾನ ಸಮಿತಿಯ ಚಂದ್ರಪ್ಪ, ಕೂಲಂಬಿ ಬಸಣ್ಣ, ವಿ.ಸಿದ್ದೇಶ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# 7 ವರ್ಷ ಪೂರೈಸಿದ ಬಿಜೆಪಿ ಸರ್ಕಾರ

## ಹರಪನಹಳ್ಳಿ : ಧವಸ-ಧಾನ್ಯ, ಹಣ್ಣು-ಹಂಪಲು ವಿತರಣೆ



ಹರಪನಹಳ್ಳಿ, ಮೇ 30- ವಿಶ್ವ ಹಿಂದೂ ಪರಿಷತ್, ಭಜರಂಗದಳ ಹಾಗೂ ಆರ್. ಎಸ್.ಎಸ್. ವತಿಯಿಂದ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿನ ನಿರಾಶ್ರಿತರು, ನಿರ್ಗತಿಕರು, ಕೂಲಿ ಕಾರ್ಮಿಕರು, ಬಡವರು, ಅಂಗವಿಕಲರಿಗೆ ಧವಸ, ಧಾನ್ಯಗಳ ಕಿಟ್ ಹಾಗೂ ಮಾಸ್ಕ್ ವಿತರಣೆ ಮಾಡಿದರು.

ಪ್ರಧಾನಿ ನರೇಂದ್ರ ಮೋದಿಯವರ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಏಳು ವರ್ಷ ತುಂಬಿದ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಸಮಾಜ ಸೇವಕ ಚಂದ್ರಶೇಖರ್ ಪೂಜಾರ್ ಮತ್ತು ಅಭಿಷೇಕ್ ಪೂಜಾರ್ ಅವರುಗಳ ನೇತೃತ್ವದಲ್ಲಿ ಈ ಕಾರ್ಯಕ್ರಮ ಇಂದು ನಡೆಯಿತು.

ರಾಜ್ಯ ಸಹಕಾರ ಪ್ರಕೋಷ್ಠದ ಸಹ ಸಂಚಾಲಕ ಜಿ. ನಂಜನಗೌಡರ ಮುಖಂಡತ್ವದಲ್ಲಿ ಪೌರ ಕಾರ್ಮಿಕರು, ಪೊಲೀಸ್ ಸಿಬ್ಬಂದಿ ವರ್ಗ, ಸಾರ್ವಜನಿಕ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಕೋವಿಡ್ ಕೇಂದ್ರದ ಸಿಬ್ಬಂದಿಗಳು, ಕೊರೊನಾ ಪೀಡಿತ ತಾಳೇದಹಳ್ಳಿ ಗ್ರಾಮಸ್ಥರಿಗೆ ಮಾಸ್ಕ್ ಹಾಗೂ ಹಣ್ಣು -ಹಂಪಲುಗಳನ್ನು ವಿತರಿಸಲಾಯಿತು.

ಪುರಸಭಾ ಸದಸ್ಯರಾದ ಕಿರಣ್ ಶಾನಭೋಗ, ವಿನಯ್ ಗೌಳಿ, ಪುರಸಭಾ ಮಾಜಿ ಉಪಾಧ್ಯಕ್ಷ ಸತ್ಯನಾರಾಯಣ, ತಾಲ್ಲೂಕು ಬಿ.ಜೆ.ಪಿ. ಯುವ ಮೋರ್ಚಾ ಉಪಾಧ್ಯಕ್ಷ ಸಂಗಮೇಶ್, ಮುಖಂಡರಾದ ಜೆ.ಓಂಕಾರಗೌಡ, ನೀಲಗುಂದದ ನಾಗರಾಜ ಪಾಟೀಲ್, ಶರತ್‌ಕುಮಾರ್, ಗಣೇಶ್ ಗಡ್ಡಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಭಾವಸಾರ ಸಮಾಜದವರಿಗೆ ದವಸ - ಧಾನ್ಯದ ಕಿಟ್



**ದಾನಿ ಜಯಪ್ರಕಾಶ್ ಅಂಬರ್‌ಕರ್ ಅವರ ಸೇವೆ ಶ್ಲಾಘನೀಯ**

ದಾವಣಗೆರೆ, ಮೇ 30- ಕೊರೊನಾ ಸೋಂಕು ಪರಿಣಾಮ ಆಗಿರುವ ಲಾಕ್ ಡೌನ್ ಹಿನ್ನೆಲೆಯಲ್ಲಿ ನಗರದ ಭಾವಸಾರ ಸಮಾಜದ ಬಡ ಕುಟುಂಬಗಳಿಗೆ ಭಾವಸಾರ ಕ್ಷತ್ರಿಯ ಸಮಾಜದ ರಾಷ್ಟ್ರೀಯ ಅಧ್ಯಕ್ಷರೂ ಆದ ರಾಜ್ಯ ಬಿಜೆಪಿ ಕಾರ್ಯಕಾರಣಿ ಸಮಿತಿಯ ಸದಸ್ಯ ಜಯಪ್ರಕಾಶ್ ಅಂಬರ್‌ಕರ್ ಅವರು ದವಸ - ಧಾನ್ಯಗಳ ಕಿಟ್ ಗಳನ್ನು ವಿತರಿಸಿದರು.

ಸುಮಾರು10 ಸಾವಿರಕ್ಕೂ ಹೆಚ್ಚು ಮನೆಗಳು ಹೊಂದಿರುವ, 25 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇರುವ ಭಾವಸಾರ ಸಮಾಜ ಬಾಂಧವರ ಮೂಲ ವೃತ್ತಿ ಟೈಲರ್ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಲಾಕ್ ಡೌನ್‌ದಿಂದ ಸಂಕಷ್ಟಕ್ಕೀಡಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಸುಮಾರು 100 ಜನರಿಗೆ ದವಸ - ಧಾನ್ಯಗಳ ಕಿಟ್ ನೀಡಲಾಯಿತು.

ಭಾವಸಾರ ಸಮಾಜದ ಬಡ ಜನರ ಯಾವುದೇ ಕಷ್ಟಗಳಿಗೆ ಸ್ಪಂದಿಸುತ್ತಿರುವ ಜಯಪ್ರಕಾಶ್ ಅವರು ಹೊಲಿಗೆ ಯಂತ್ರಗಳನ್ನು ಕೊಡುಗೆ ನೀಡಿದ್ದಾರೆ ಎಂದು ತಿಳಿಸಿರುವ ಸಮಾಜದ ತರುಣ ಮಂಡಳಿದ ಪದಾಧಿಕಾರಿಗಳು, ಜಯಪ್ರಕಾಶ್ ಅಂಬರ್ ಕರ್ ಅವರ ಸಾಮಾಜಿಕ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಭಜನಾ ಮಂಡಳಿ ಮತ್ತು ತರುಣ ಮಂಡಳದ ಗೌರವಾಧ್ಯಕ್ಷ ಹ.ಭ.ಪ ಚಂದ್ರಕಾಂತ ವಾದೋನಿ, ಅಧ್ಯಕ್ಷ ವಿಜಯ್ ಕುಮಾರ್ ವಾದೋನಿ, ಉಪಾಧ್ಯಕ್ಷ ಮಾಲತೇಶ್ ಗುಜ್ಜರ್, ಕಾರ್ಯದರ್ಶಿ ಲಖನ್ ಕುಮಾರ್ ಅಂಬೇಕರ್, ಖಜಾಂಚಿ ವಿನಯ್ ಝಿಂಗಾಡೆ, ಸಹ ಕಾರ್ಯದರ್ಶಿ ವಿಶ್ವನಾಥ್ ಪುಟಾಣಕರ್, ಸಂಘಟನಾ ಕಾರ್ಯ ದರ್ಶಿಗಳಾದ ರವಿ ಹೆಬ್ಬಾರೆ, ವಿನಾಯಕ ಟಿಕಾರೆ, ತರುಣ ಮಂಡಳದ ಮಾಜಿ ಅಧ್ಯಕ್ಷ ಲೋಕೇಶ್ ಬೆಳಂಕರ್, ಭಜನಾ ಮಂಡಳಿಯ ಸದಸ್ಯ ವಿಠ್ಠಲ ವಂಟಕರ್ ಹಾಗೂ ಮತ್ತಿತರರು ಉಪಸ್ಥಿತರಿದರು.

# ಜಿಲ್ಲೆಯಲ್ಲಿ 8 ಸಾವು, 698 ಪಾಸಿಟಿವ್

**(1ನೇ ಪುಟದಿಂದ)** ಮಾಗಾನಹಳ್ಳಿಯ 30 ವರ್ಷದ ಯುವಕ, ಜಗಳೂರು ತಾಲ್ಲೂಕು ಗೊಲ್ಲರಹಟ್ಟಿಯ 70 ವರ್ಷದ ಪುರುಷ, ಹರಿಹರ ತಾಲ್ಲೂಕು ಭಾನುವಳ್ಳಿಯ 40ರ ಪುರುಷ ಹಾಗೂ ಹೊನ್ನಾಳಿ ತಾಲ್ಲೂಕಿನ ಮುಕ್ತೇನಹಳ್ಳಿಯ 48ರ ಮಹಿಳೆ, ಕೂಲಂಬಿ 60ರ ಪುರುಷ, ಬೆನಕನಹಳ್ಳಿಯ 42ರ ಪುರುಷ, ಯಕ್ಕನಹಳ್ಳಿಯ 80ರ ಪುರುಷ ಹಾಗೂ ಹತ್ತೂರು ಗ್ರಾಮದ 40 ವರ್ಷದ ಪುರುಷ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

# ವಸತಿ ಕಾಮಗಾರಿ 6 ತಿಂಗಳಲ್ಲಿ ಪೂರ್ಣ

**(1ನೇ ಪುಟದಿಂದ)** ನಿಯಮಾನುಸಾರ ಲೇಔಟ್ ಅಭಿವೃದ್ಧಿಪಡಿಸಲಾಗುತ್ತಿದೆ. ಆದರೆ ಅಕ್ಕಪಕ್ಕದ ಕೆಲ ರೈತರು ತಮ್ಮ ತೋಟ ಮತ್ತು ಹೊಲಗಳಿಗೆ ಲೇಔಟ್ ಎತ್ತರವಾಗುವ ಕಾರಣ ತಮ್ಮ ಜಮೀನಿನಲ್ಲಿ ಮಳೆ ನೀರು ನಿಂತು ಶೀತಬಾಧೆ ಕಾಡಲಿದೆ. ಆದ ಕಾರಣ ಕಾಲುವೆ ನಿರ್ಮಿಸಿ ನೀರು ಹೋಗುವಂತೆ ವ್ಯವಸ್ಥೆ ಮಾಡಿಕೊಡಲು ಮನವಿ ಮಾಡಿದ್ದಾರೆ. ಆ ಪ್ರಕಾರವೇ ಅಕ್ಕಪಕ್ಕದ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ವ್ಯವಸ್ಥೆ ಮಾಡಲು ಸೂಚನೆ ನೀಡಿದ್ದೇನೆ ಎಂದರು.

ವಸತಿ ಪ್ರದೇಶದಲ್ಲಿ 24x7 ಶುದ್ಧವಾದ ನೀರು, 4 ಪಾರ್ಕ್, 3 ಲಕ್ಷ ಸಾಮರ್ಥ್ಯದ 3 ವಾಟರ್ ಟ್ಯಾಂಕ್, ಆಸ್ಪತ್ರೆ, ಅಂಗನವಾಡಿ ಕೇಂದ್ರ, ಪ್ರೈಮರಿ ಶಾಲೆ, ಸೇರಿದಂತೆ ಹಲವು ಸೌಕರ್ಯಗಳನ್ನು ಕಲ್ಪಿಸಲಾಗುವುದು. ಅಕ್ಕ ಪಕ್ಕದ ಜಮೀನು ಮಾಲೀಕರು ಜಮೀನು ನೀಡುವುದಕ್ಕೆ ಮುಂದಾದರೆ ಅವುಗಳನ್ನು ಪಡೆದು ಹೆಚ್ಚು ನಿವೇಶನವನ್ನು ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದರು.

**ಬಿಎಸ್‌ವೈ ಬದಲಾವಣೆ ಸಾಧ್ಯವಿಲ್ಲ:** ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ. ಈ ಬಗ್ಗೆ ರಾಜ್ಯಾಧ್ಯಕ್ಷರು ಹಾಗೂ ನಾಯಕರು ಕೇಂದ್ರದ ನಾಯಕರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎಂದು ಸಚಿವ ಸೋಮಣ್ಣ ಸ್ಪಷ್ಟಪಡಿಸಿದರು.

ಲಾಕ್‌ಡೌನ್ ಗೆ ಸಂಬಂಧಿಸಿದಂತೆ ಜೂನ್ 7 ರವರೆಗೆ ಈಗ ಇರುವ ನಿರ್ಬಂಧಗಳು ಚಾಲ್ತಿಯಲ್ಲಿರು ತ್ತವೆ. ಪ್ರಸ್ತುತ ಶೇ.10 ರಷ್ಟು ಕೋವಿಡ್ ಪ್ರಕರಣ ಕಡಿಮೆ ಆಗಿದೆ. ಇನ್ನೂ ಕಡಿಮೆ ಆಗಬೇಕು.

ಜೂನ್ 7 ರ ನಂತರ ನಿರ್ಬಂಧಗಳನ್ನು ಮುಂದುವರೆಸಬೇಕಾ ಅಥವಾ ಬೇಡವಾ ಎಂಬ ಬಗ್ಗೆ ಪರಿಸ್ಥಿತಿ ನೋಡಿ ಮುಖ್ಯಮಂತ್ರಿಗಳು ನಿರ್ಧರಿಸಲಿದ್ದಾರೆ. ಸಿಎಂ ನಿರ್ಧಾ ರಕ್ಕೆ ನಮ್ಮ ಸಹಮತ ಇರುವುದಾಗಿ ಹೇಳಿದರು.

**ಸಚಿವರು-ಜಮೀನು ಮಾಲೀಕರೊಂದಿಗೆ ಮಾತಿನ ಚಕಮಕಿ:** ಪಕ್ಕದ 14 ಎಕರೆ ಜಮೀನುಗಳಿಗೆ ನೀರು ಹರಿದು ಬರುತ್ತದೆ. ಆದ್ದರಿಂದ ಚರಂಡಿ ನಿರ್ಮಿಸಬೇಕೆಂದು ಜಮೀನು ಮಾಲೀಕರಾದ ರಂಗಣ್ಣ, ಓಂಕಾರಪ್ಪ, ಕರಿಬಸಪ್ಪ, ಶಿವಪ್ಪ, ಚೆನ್ನಬಸಪ್ಪ, ಜಂಬಣ್ಣ ರಾಜಶೇಖರ್, ಇತರರು ಸಚಿವರ ಬಳಿ ಮನವಿ ಮಾಡಲು ಮುಂದಾದ ವೇಳೆ ರಾಜಶೇಖರ್ ಮತ್ತು ಸಚಿವ ಸೋಮಣ್ಣ ನವರ ನಡುವೆ ಮಾತಿನ ಚಕಮಕಿ ನಡೆಯಿತು.

ನಾನೂ ಸಹ ರೈತ ಕುಟುಂಬದಿಂದ ಬಂದವನು. ಅತಿರೇಕದ ವರ್ತನೆ ಸಲ್ಲದು ಎಂದು ಸಚಿವ ಸೋಮಣ್ಣ ರಾಜಶೇಖರ್ ಅವರಿಗೆ ಹೇಳಿದ್ದರಿಂದ ಅಸಮಾಧಾನಗೊಂಡ ಅವರು, ರೈತರ ಬಗ್ಗೆ ಅಸಡ್ಡೆಯಿಂದ ಮಾತನಾಡಬೇಡಿ ಎಂದರು. ನಂತರ ಸಚಿವರು ಶೀಘ್ರವಾಗಿ ಚರಂಡಿ ನಿರ್ಮಾಣ ಮಾಡುವುದಕ್ಕೆ ಸೂಚಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ್, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ನಗರಸಭೆ ಅಧ್ಯಕ್ಷೆ ರತ್ನ ಡಿ ಉಜ್ಜೇಶ್, ಉಪಾಧ್ಯಕ್ಷ ಬಾಬುಲಾಲ್, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ವಿರುಪಾಕ್ಷ, , ಸಿಪಿಐ ಸತೀಶ್ ಕುಮಾರ್, ನಗರಸಭೆ ಎಇಇ ಬಿರಾದಾರ, ಗೃಹ ಮಂಡಳಿಯ ಅಧಿಕಾರಿಗಳು ಮತ್ತು ಬಿಜೆಪಿ ಪಕ್ಷದ ಮುಖಂಡರು ಹಾಜರಿದ್ದರು.

# ಸಿಸಿ ಸೆಂಟರ್‌ಗಳಿಗೆ 5 ಕಾನ್ಸಂಟ್ರೇಟರ್‌ಗಳ ಕೊಡುಗೆ



ಮಲೇಬೆನ್ನೂರು, ಮೇ 30- ಜಿಲ್ಲಾ ಮಲೇರಿಯಾ ಅಧಿಕಾರಿ ಹಾಗೂ ಹರಿಹರ ತಾಲ್ಲೂಕು ಕೋವಿಡ್ ನೋಡಲ್ ಅಧಿಕಾರಿ ಡಾ. ನಟರಾಜ್ ಅವರ ಸ್ನೇಹಿತ ರಾದ ಸತೀಶ್ ಅಂಬಾಟಿ ಮತ್ತು ಸಿರೀಶಾ ಅವರು ಕ್ಯಾಲಿಫೋರ್ನಿಯಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಡಾ.ನಟರಾಜ್ ಅವರ ಕೋರಿಕೆ ಮೇರೆಗೆ ಸುಮಾರು 4 ಲಕ್ಷ ರೂ. ವೆಚ್ಚದಲ್ಲಿ 5 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಹರಿಹರ ತಾಲ್ಲೂಕಿಗೆ ಕೊಡುಗೆ ನೀಡಿದ್ದಾರೆ.

ಗುತ್ತೂರಿನಲ್ಲಿರುವ ಕೋವಿಡ್ ಕೇರ್ ಸೆಂಟರ್-2, ಹರಿಹರ ಎಸ್‌ಜೆವಿಪಿ ಕೇರ್ ಸೆಂಟರ್‌ಗೆ -2 ಮತ್ತು ಕೊಂಡಜ್ಜಿಯಲ್ಲಿ ರುವ ಕೇರ್ ಸೆಂಟರ್‌ಗೆ -1 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ರೋಗಿಗಳ ಸೇವೆಗೆ ಡಾ.ನಟರಾಜ್ ಅವರು ನೀಡಿದರು.

ಡಾ.ವಿಶ್ವನಾಥ್, ತಾಲ್ಲೂಕು ಹಿರಿಯ ಆರೋಗ್ಯ ಸಹಾಯಕ ಎಂ.ಉಮ್ಮಣ್ಣ, ಸ್ಟಾಫ್‌ನರ್ಸ್ ಗೀತಾ ಮತ್ತಿತರರು ಈ ವೇಳೆ ಹಾಜರಿದ್ದರು.

**ಪಾಸಿಟಿವ್ ಕೇಸ್ ಇಳಿಕೆ :** ಹರಿಹರ ತಾಲ್ಲೂಕಿನಲ್ಲಿ ಕೊರೊನಾ ಪಾಸಿಟಿವ್ ಕೇಸ್‌ನಲ್ಲಿ ಇಳಿಕೆ ಕಂಡಿದ್ದು, ಶನಿವಾರ 109 ಇದ್ದ ಪಾಸಿಟಿವ್ ಕೇಸ್ ಭಾನುವಾರ ಬೆಳಿಗ್ಗೆ ವರದಿ ಪ್ರಕಾರ 44ಕ್ಕೆ ಇಳಿಕೆಯಾಗಿದೆ.

ಭಾನುವಾರ ಸಂಜೆ ವೇಳೆಗೆ 223 ಕೋವಿಡ್ ಟೆಸ್ಟ್ ಆಗಿದ್ದು, 34 ಜನರಿಗೆ ಸೋಂಕು ದೃಢಪಟ್ಟಿದೆ. ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇವತ್ತು 10 ಜನರು ಮಾತ್ರ ಕೋವಿಡ್ ಟೆಸ್ಟ್‌ಗೆ ಒಳಗಾಗಿದ್ದು, ಇಬ್ಬರಿಗೆ ಪಾಸಿಟಿವ್ ಬಂದಿದೆ. ಸೋಮವಾರವೂ ಕೋವ್ಯಾಕ್ಸಿನ್ 2ನೇ ಡೋಸ್ ಲಸಿಕೆ ಹಾಕಲಾಗುವುದೆಂದು ವೈದ್ಯ ಡಾ.ನಿಸಾರ್ ತಿಳಿಸಿದ್ದಾರೆ.

# ‘ತಂಬಾಕು ಸೇವನೆ ಬೇಡ, ಬಿಡಿ’

**(ಇಂದು ವಿಶ್ವ ತಂಬಾಕು ರಹಿತ ದಿನ)**

ತಂಬಾಕು ಸೇವನೆ ಮಾಡಲೇ ಬೇಡಿ,<br>
ಉಬ್ಬಸ ಬರುವುದು ಸೇದಲು ಬೀಡಿ.<br>
ಪ್ರತಿಷ್ಟೆಗೆಂದು ಎಳೆದರೆ ಸಿಗರೇಟು,<br>
ಸಾವು ತರುವುದೆದೆ ಸೇರಲು ಘಾಟು.

ಎಲೆಯಡಿಕೆಯೊಂದಿಗೆ ತಂಬಾಕು ಜಗಿತ,<br>
ಬಾಯಿಗು, ದೇಹಕು ಅಪಾಯ ಖಂಡಿತ,<br>
ಸೇವಿಸುತ್ತಿದ್ದರೆ ಪಾನುಗುಟ್ಕಾ,<br>
ಬಾಯಿಗೆ ಕ್ಯಾನ್ಸರ್ ಬರುವುದು ಪಕ್ಕಾ.

ಮೂಗಿಗೆ ಏರುವ ನಶ್ಯದ ಚಿಟಿಕೆ,<br>
ಕಾರಣವದು ತಾ ಮಿದುಳಿನ ಪಾಯಕೆ.<br>
ಸೇದಿದರಂತೂ ತಂಬಾಕು ಚುಟ್ಟ,<br>
ಏರಿಸುವುದು ಅದು ಬೊಂಬಿನ ಚಟ್ಟ.

ಹೊಗೆಯೋ, ಜಗಿತವೋ, ನಶ್ಯದ ಪುಡಿಯೋ<br>
ತಂಬಾಕು ಸವಿಯುವ ಯಾವುದೇ ಪರಿಯೋ,<br>
ದುಶ್ಚಟಗಳನು ದೂರವೆ ಇಡಿರಿ,<br>
ತಂಬಾಕು ಸೇವನೆ ಮಾಡಲೇಬೇಡಿರಿ.

**- ಹೆಚ್.ಬಿ.ಮಂಜುನಾಥ್**, ಹಿರಿಯ ಪತ್ರಕರ್ತ

# ಜೂನ್‌ನಲ್ಲಿ 12 ಕೋಟಿ ಲಸಿಕೆ : ಆರೋಗ್ಯ ಸಚಿವಾಲಯ

**(1ನೇ ಪುಟದಿಂದ)** ಮಾಡಲಾಗುವುದು ಎಂದು ತಿಳಿಸಿದೆ.

ಜೂನ್ ತಿಂಗಳಿನಾದ್ಯಂತ ಲಭ್ಯವಿರುವ ಲಸಿಕೆಯ ಅಂದಾಜನ್ನು ಮೊದಲೇ ರಾಜ್ಯಗಳಿಗೆ ತಿಳಿಸಲಾಗಿದೆ. ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ 45 ವರ್ಷ ಮೀರಿದವರಿಗೆ ಕೇಂದ್ರ ಸರ್ಕಾರ ಉಚಿತವಾಗಿ 6.09 ಕೋಟಿ ಲಸಿಕೆ ಒದಗಿಸಲಿದೆ ಎಂದು ಸಚಿವಾಲಯ ಹೇಳಿದೆ. ಇದರ ಜೊತೆಗೆ ರಾಜ್ಯಗಳು ಹಾಗೂ ಖಾಸಗಿ ಆಸ್ಪತ್ರೆಗಳು 5.86 ಕೋಟಿ ಲಸಿಕೆಗಳನ್ನು ನೇರವಾಗಿ ಖರೀದಿಸಬಹುದು. ಒಟ್ಟಾರೆ ಜೂನ್ ತಿಂಗಳಲ್ಲಿ 12 ಕೋಟಿ ಲಸಿಕೆಗಳು ಲಭ್ಯವಾಗಲಿವೆ ಎಂದು ತಿಳಿಸಲಾಗಿದೆ.

ಈ ಲಸಿಕೆಗಳನ್ನು ಒದಗಿಸುವ ವೇಳಾಪಟ್ಟಿಯನ್ನು ರಾಜ್ಯಗಳ ಜೊತೆ ಮುಂಚೂಣಿಯಾಗಿ ಹಂಚಿಕೊಳ್ಳಲಾಗುವುದು ಎಂದೂ ತಿಳಿಸಲಾಗಿದೆ.

ಮೇ ತಿಂಗಳಲ್ಲಿ 4 ಕೋಟಿ ಲಸಿಕೆಗಳನ್ನು ಕೇಂದ್ರ ಸರ್ಕಾರ ರಾಜ್ಯಗಳಿಗೆ ಒದಗಿಸಿತ್ತು. ಇದರ ಜೊತೆಗೆ ಮೇ ತಿಂಗಳಲ್ಲಿ ರಾಜ್ಯಗಳು ಹಾಗೂ ಖಾಸಗಿ ಆಸ್ಪತ್ರೆಗಳು ಖರೀದಿಸಲು 3.90 ಕೋಟಿ ಲಸಿಕೆಗಳು ಲಭ್ಯವಿದ್ದವು.

# ಅಂತ್ಯಕ್ರಿಯೆಗಾಗಿ 3 ಹಂತದ ವ್ಯವಸ್ಥೆ

**(1ನೇ ಪುಟದಿಂದ)** ಮೃತದೇಹಗಳನ್ನು ನದಿಗಳ ಪಕ್ಕ ಮರಳಿನಲ್ಲಿ ಹೂಳಲಾಗುತ್ತಿದೆ. ಗಾಳಿ ಬಂದಾಗ ಈ ಮರಳು ಹಾರಿ ಹೋಗಿ ಮೃತದೇಹಗಳು ಹೊರಗೆ ಕಂಡು ಬರುತ್ತಿವೆ ಎಂದು ಜಿಂದಾಲ್ ಪರವಾಗಿ ವಕೀಲ ರಾಜ್ ಕಿಶೋರ್ ಚೌಧರಿ ಅರ್ಜಿಯಲ್ಲಿ ಹೇಳಿದ್ದಾರೆ.

ಗಂಗಾ ನದಿ ದಡವನ್ನು ಜೈವಿಕ ಸೂಕ್ಷ್ಮ ಪ್ರದೇಶ ಎಂದು ಘೋಷಿಸಬೇಕು. ಆ ಪ್ರದೇಶವನ್ನು ರಕ್ಷಿಸಬೇಕು. ದಡದಲ್ಲಿ ಹೂಳಲಾಗಿರುವ ಮೃತದೇಹಗಳನ್ನು ತೆರವುಗೊಳಿಸುವಂತೆ ಉತ್ತರ ಪ್ರದೇಶ ಹಾಗೂ ಬಿಹಾರಗಳಿಗೆ ಸೂಚಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

# ನಮ್ಮವರಿಲ್ಲದ ನಾವು...

ಹೌದು! ನಾವಿದ್ದೇವೆ, ಇಂದು ನಮ್ಮೊಂದಿಗೆ<br>
ಆದರೆ, ನಮ್ಮವರಿಲ್ಲ ಎಂದೆಂದೂ ನಮಗೆ!

ಬದುಕಲು ನಮಗೆ ಎಲ್ಲ ರೀತಿಯ ಹಕ್ಕಿದೆ<br>
ಆದರೆ, ಅವರು ತೋರುವ ಅಕ್ಕರೆ ಎಲ್ಲಿದೆ?

ಜೀವಿಸಲು ನಮಗೆ ಜಾಗವಿದೆ-ಮನೆಯಿದೆ<br>
ಆದರೆ, ಮನದಲ್ಲವರ ನೆನಪಿನ ಮೌನವಿದೆ!


ಜೊತೆಯಿರಲು ಮಡದಿ-ಮಕ್ಕಳು ಎಲ್ಲಾ<br>
ಆದರವರ ಮಡದಿ-ಮಕ್ಕಳಿಗೆ ಅವರೇ ಇಲ್ಲ

ನನ್ನವರು ಸತ್ತಾಗ ರೋಧಿಸಲು, ಇತ್ತು ಅವರ ಸಾಂತ್ವನ...<br>
ಅವರು ಸತ್ತಾಗ ಸಂತೈಸಿಸಲು ಆಸ್ಪದವೇ ಇಲ್ಲ ಈ ದಿನ!

ಅವರಿಗೂ ಹಕ್ಕಿತ್ತು, ಮನೆಯಿತ್ತು, ಸಂಸಾರದ ಪಾಶವಿತ್ತು...<br>
ಆದರವರಿಗೆ ಅದೃಷ್ಟವಿರಲಿಲ್ಲ, ವೈರಾಣುವಿನ ಶಾಪವಿತ್ತು!

**- ಕೆ.ಆರ್.ವೆಂಕಟೇಶ್ ಗೌಡ**
Venkateshgowdakr@gmail.com

# ಸೋಂಕು ಹೆಚ್ಚಿದ್ದರೂ ಸಹ ಮಟನ್ ವ್ಯಾಪಾರ



**ಹರಿಹರ**

ಹರಿಹರ, ಮೇ 30- ನಗರದ ಗಾಂಧಿನಗರದ ಹಲವು ಮಟನ್ ಅಂಗಡಿಗಳು ಲಾಕ್‌ಡೌನ್ ಕಾನೂನು ಉಲ್ಲಂಘನೆ ಮಾಡಿ ತಮ್ಮ ವ್ಯಾಪಾರ ವಹಿವಾಟು ಮಾಡುತ್ತಿದ್ದಾರೆ. ಆದರೆ, ಅಧಿಕಾರಿಗಳು ತಮ್ಮ ಗಮನಕ್ಕೆ ಇದ್ದರೂ ತಮಗೂ ಇದಕ್ಕೂ ಯಾವುದೇ ಸಂಬಂಧವಿಲ್ಲವೇನೋ ಎಂಬಂತೆ ವರ್ತಿಸುತ್ತಿದ್ದಾರೆ.

ಭಾನುವಾರ ಆಗಿರುವುದರಿಂದ ಇಲ್ಲಿಗೆ ಖರೀದಿಸಲು ಆಗಮಿಸಿದ್ದ ಸಾರ್ವಜನಿಕರು ಯಾವುದೇ ಅಂತರವನ್ನೂ ಕಾಯ್ದುಕೊಂಡಿರ ಲಿಲ್ಲ. ಮಾಸ್ಕ್ ಧರಿಸಿರಲಿಲ್ಲ. ಹೀಗಾದರೆ ಕೊರೊನಾ ಕಡಿಮೆ ಆಗಲಿ ಎಂದು ಸರ್ಕಾರ ಎಷ್ಟು ಹರಸಾಹಸ ಮಾಡಿದರೂ ಏನು ಪ್ರಯೋಜನ ಆಗುತ್ತದೆ. ಇಲ್ಲಿನ ಜನಪ್ರತಿನಿಧಿಗಳು ಕಾನೂನು ಉಲ್ಲಂಘನೆ ಮಾಡಿ ಸಂಜೆಯವರೆಗೆ ತಮ್ಮ ವ್ಯಾಪಾರ ವಹಿವಾಟು ಮಾಡಿದರು.

ಜೆ.ಸಿ. ಬಡಾವಣೆಯ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಇರುವ ಸಮೀವುಲ್ಲಾ ಮಾಲೀಕತ್ವದ ಮಟನ್ ಅಂಗಡಿಯಲ್ಲೂ ಸಹ ಸಂಜೆಯವರೆಗೂ ವ್ಯಾಪಾರ ವಹಿವಾಟು ಜೋರಾಗಿ ನಡೆದಿದೆ.

ಇಲ್ಲಿನ ಅಂಗಡಿಯವರು ತಮ್ಮ ವ್ಯಾಪಾರ ಮಾಡುವುದಕ್ಕೆ ಬಳಸಿರುವ ವಸ್ತುಗಳನ್ನು ಪಕ್ಕದಲ್ಲಿ ಇರುವ ನಲ್ಲಿಯಲ್ಲೇ ತೊಳೆಯುವುದು ಮಾಡುವುದರಿಂದ ಈ ನಲ್ಲಿಯಲ್ಲಿ ನೀರು ಬಳಕೆ ಮಾಡುವುದಕ್ಕೆ ಸ್ಥಳೀಯ ಜನರು ಭಯ ಪಟ್ಟಿಕೊಳ್ಳುತ್ತಿದ್ದಾರೆ. ಮೂಳೆಗಳನ್ನು ನೀರು ಬಂದ್ ಮಾಡುವುದಕ್ಕೆ ಬಳಕೆ ಮಾಡುವುದು, ಆಂಜನೇಯನ ವಿಗ್ರಹದ ಪೂಜೆಗೂ ನೀರನ್ನು ಬಳಕೆ ಮಾಡಲಾಗುತ್ತಿಲ್ಲ. ಇದನ್ನು ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದಾಗ ಅಲ್ಲಿನ ನಲ್ಲಿಯ ನೀರನ್ನು ಬಂದ್ ಮಾಡಿಸಿ, ನಗರಸಭೆ ಸದಸ್ಯ ಆರ್. ಸಿ. ಜಾವೇದ್ ಅವರು ಪಕ್ಕದಲ್ಲಿ ಒಂದು ಹೊಸದಾಗಿ ನೀರಿನ ಟ್ಯಾಂಕ್ ಕಟ್ಟಿಸಿದರು. ಆ ನಲ್ಲಿ ನೀರನ್ನು ಮಟನ್ ಅಂಗಡಿ ಮಾಲೀಕರು ಮಾತ್ರ ಬಳಸಿಕೊಳ್ಳ ತ್ತಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ.

**ಪೌರಾಯುಕ್ತರ ಪ್ರತಿಕ್ರಿಯೆ :** ಮಟನ್ ಮತ್ತು ಚಿಕನ್ ಅಂಗಡಿಗಳಿಗೆ ಬೆಳಿಗ್ಗೆ ಭೇಟಿ ನೀಡಿ ಬಾಗಿಲು ಹಾಕುವುದಕ್ಕೆ ಸೂಚನೆ ನೀಡಲಾಗಿದೆ. ಸಾರ್ವಜನಿಕರು ಸಹ ಲಾಕ್ ಡೌನ್ ಇರೋದಕ್ಕೆ ಮನೆಯಲ್ಲಿ ಇರುತ್ತಾರೆ. ಅವರು ಒತ್ತಡವನ್ನು ಹಾಕಿ ಅಂಗಡಿಗಳು ವ್ಯಾಪಾರ ವಹಿವಾಟು ನಡೆಸಲು ಹೇಳಿರೋದರಿಂದ ವ್ಯಾಪಾರಸ್ಥರು ವ್ಯಾಪಾರ ಮಾಡುವುದಕ್ಕೆ ಮುಂದಾಗಿರಬಹುದು ಎಂದು ಪೌರಾಯುಕ್ತರಾದ ಎಸ್. ಲಕ್ಷ್ಮಿ ಹೇಳಿದರು.

**ತಹಶೀಲ್ದಾರ್ ಪ್ರತಿಕ್ರಿಯೆ :** ಗಾಂಧಿ ನಗರದಲ್ಲಿ ಮತ್ತು ವಿವಿಧ ಬಡಾವಣೆಗಳಲ್ಲಿ ಕಾನೂನು ಉಲ್ಲಂಘನೆ ಮಾಡಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಮಟನ್ ಮತ್ತು ಚಿಕನ್ ಅಂಗಡಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಅವುಗಳನ್ನು ಬಂದ್ ಮಾಡಿಸುವ ಕೆಲಸವನ್ನು ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ನಗರಸಭೆ ಅಧಿಕಾರಿಗಳು ಮಾಡಬೇಕು. ಅಂಗಡಿಗಳು ತೆರೆದುಕೊಂಡು ವ್ಯಾಪಾರ ವಹಿವಾಟು ಮಾಡುತ್ತಿದ್ದರೆ ತಕ್ಷಣವೇ ಬಂದ್ ಮಾಡಲು ಸೂಚನೆ ನೀಡಲಾಗುತ್ತದೆ ಎಂದು ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಅವರು ಹೇಳಿದರು.

# ಇಂದು ವಿಶ್ವ ತಂಬಾಕು ರಹಿತ ದಿನಾಚರಣೆ, ವೈದ್ಯರಿಂದ ಸಲಹೆ

ಮೇ 31 ರಂದು ವಿಶ್ವ ಆರೋಗ್ಯ ಸಂಸ್ಥೆಯು ತಂಬಾಕು ರಹಿತ ದಿನಾಚರಣೆ ಆಚರಿಸುತ್ತಿದ್ದು, ಈ ಬಾರಿ ‘ತ್ಯಜಿಸಲು ಬದ್ಧರಾಗಿರಿ’ ಎಂಬ ಘೋಷ ವಾಕ್ಯದೊಂದಿಗೆ ಆಚರಿಸುತ್ತಿದೆ.

ಲಾಕ್‌ಡೌನ್ ಜಾರಿಯಲ್ಲಿರುವುದ ರಿಂದ ವಿಶ್ವ ತಂಬಾಕು ರಹಿತ ದಿನಾಚರಣೆ ಪ್ರಯುಕ್ತ ಇಂದು ಫೋನಿನ ಮೂಲಕವೇ ಬಾಯಿಯ ಸಮಸ್ಯೆಗಳಿಗೆ ಕೌನ್ಸಿಲಿಂಗ್ ಮಾಡಲಾಗುವುದು.

ಗುಟ್ಕಾ ಹಾಗೂ ತಂಬಾಕು ಸೇವನೆಯಿಂದ ಬಾಯಿ ಉರಿ, ಬಾಯಿ ಸಂಪೂರ್ಣ ತೆರೆಯುವುದಕ್ಕೆ ಆಗ ದಿರುವುದು, ಈ ದುರಭ್ಯಾಸದಿಂದ ಹೊರ ಬರಲು ಇಚ್ಛಿಸುವವರು ಹಾಗೂ ತೀವ್ರತರವಾದ ಹಲ್ಲು ನೋವಿನಿಂದ ಬಳಲುತ್ತಿರುವವರು, ಸಮಸ್ಯೆ ಇರುವವರು ಮೊಬೈಲ್ ನಂಬರ್‌ಗೆ ಕರೆಯ ಮೂಲಕ ತಮ್ಮ ಸಮಸ್ಯೆಗಳಿಗೆ ದಂತ ವೈದ್ಯರಿಂದಲೇ ತಾತ್ಕಾಲಿಕ ಪರಿಹಾರ ಪಡೆಯಬಹುದು.

ವಿವರಗಳಿಗೆ ಇಂದು ಬೆಳಿಗ್ಗೆ 10 ರಿಂದ 1 ರವರೆಗೆ, ಮಧ್ಯಾಹ್ನ 2 ರಿಂದ ಸಂಜೆ 5 ರವರೆಗೆ ಮೊಬೈಲ್ ಸಂಖ್ಯೆ 93809 84534 ಗೆ ಸಂಪರ್ಕಿಸುವುದು.

# 46 ದಿನಗಳಲ್ಲೇ ಕಡಿಮೆ ಕೊರೊನಾ

ನವದೆಹಲಿ, ಮೇ 30 – ದೇಶದಲ್ಲಿ ಭಾನುವಾರ 1.65 ಲಕ್ಷ ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದು 46 ದಿನಗಳಲ್ಲೇ ಅತಿ ಕಡಿಮೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಟೆಸ್ಟ್ ಸಂದರ್ಭದಲ್ಲಿ ಕಂಡು ಬರುವ ಪಾಸಿಟಿವ್ ದರ ಶೇ.8.02ಕ್ಕೆ ಕುಸಿದಿದೆ. ಕಳೆದ ಆರು ದಿನಗಳಿಂದ ಪಾಸಿಟಿವ್ ದರ ಶೇ.10ಕ್ಕಿಂತ ಕಡಿಮೆ ಇದೆ. ವಾರದ ಪಾಸಿಟಿವ್ ದರ ಶೇ.9.36ಕ್ಕೆ ಇಳಿಕೆಯಾಗಿದೆ. ಕೊರೊನಾದಿಂದ ಭಾನುವಾರ 3,460 ಜನ ಸಾವನ್ನಪ್ಪಿದ್ದು, ಒಟ್ಟು ಮೃತರ ಸಂಖ್ಯೆ 3.25 ಲಕ್ಷಕ್ಕೆ ತಲುಪಿದೆ. ಸಕ್ರಿಯ ಸೋಂಕಿತರ ಸಂಖ್ಯೆ ಈಗ 21.14 ಲಕ್ಷಕ್ಕೆ ಇಳಿಕೆಯಾಗಿದೆ. ಇದು ಒಟ್ಟು ಸೋಂಕಿತರ ಶೇ.7.58ರಷ್ಟಾಗಿದೆ. ದೈನಂದಿನ ಸೋಂಕಿತರ ಸಂಖ್ಯೆ 46 ದಿನಗಳಲ್ಲೇ ಅತಿ ಕಡಿಮೆಯಾಗಿದೆ.

# ಆಕ್ಸಿಜನ್ ಬೇಡಿಕೆ ಇಳಿಕೆ

**(1ನೇ ಪುಟದಿಂದ)** ಮೂಲಭೂತ ಸೌಲಭ್ಯಗಳ ಯೋಜನೆಗಳಿಗೆ ಉತ್ತೇಜನ ನೀಡಲು ಹಾಗೂ ಆರ್ಥಿಕ ಚಟುವಟಿಕೆಗಳನ್ನು ಚುರುಕುಗೊಳಿಸುವುದು ಮಹತ್ವ ಪಡೆದಿದೆ.

ಉಕ್ಕು ತಯಾರಿಕೆ, ಲೋಹಗಳ ಸಂಸ್ಕರಣೆ, ಫ್ಯಾಬ್ರಿಕೇಷನ್, ಔಷಧಿ, ಪೆಟ್ರೋಲಿಯಂ ಸಂಸ್ಕರಣೆ, ಗಾಜು, ಸೆರಾಮಿಕ್, ಕಾಗದದ ಉತ್ಪಾದನೆ ಸೇರಿದಂತೆ ಹಲವಾರು ಕೈಗಾರಿಕೆಗಳು ದ್ರವ ಆಕ್ಸಿಜನ್ ಬಳಸುತ್ತವೆ.

ಸಾಮಾನ್ಯ ಸಮಯದಲ್ಲಿ ಆಕ್ಸಿಜನ್ ಉತ್ಪಾದನೆ ದಿನಕ್ಕೆ 900 ಮೆಟ್ರಿಕ್ ಟನ್ ಆಗಿತ್ತು. ಈಗ ದೇಶದಲ್ಲಿ 9,500 ಮೆಟ್ರಿಕ್ ಟನ್ ಆಕ್ಸಿಜನ್ ಉತ್ಪಾದನೆಯಾಗುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಭಾನುವಾರ ತಿಳಿಸಿದ್ದರು.

ಮೇ ಆರಂಭದಲ್ಲಿ ದೇಶದಲ್ಲಿ ಪ್ರತಿನಿತ್ಯ 4 ಲಕ್ಷದವರೆಗೆ ಕೊರೊನಾ ಸೋಂಕಿತರು ಕಂಡು ಬರುತ್ತಿದ್ದರು. ಈಗ ಅವರ ಸಂಖ್ಯೆ 2 ಲಕ್ಷಕ್ಕೂ ಕಡಿಮೆ ಇದೆ.

# ಸೋಂಕು ಮುಕ್ತ ಗ್ರಾಮಗಳ ಸೀಲ್‌ಡೌನ್



ಮಲೇಬೆನ್ನೂರು, ಮೇ 30- ಕೊರೊನಾ ಮಹಾಮಾರಿ 2ನೇ ಅಲೆಯಲ್ಲಿ ಇದುವರೆಗೂ ಒಂದೇ ಒಂದು ಪಾಸಿಟಿವ್ ಪ್ರಕರಣ ಪತ್ತೆಯಾಗದೆ ಕೊರೊನಾ ಮುಕ್ತವಾಗಿರುವ ಹರಿಹರ ತಾಲ್ಲೂಕಿನ 6 ಗ್ರಾಮಗಳನ್ನು ಭಾನುವಾರ ಸೀಲ್‌ಡೌನ್ ಮಾಡಲಾಗಿದೆ.

ಜಿಗಳಿ ಗ್ರಾ.ಪಂ ವ್ಯಾಪ್ತಿಯ ವಡೆಯರ ಬಸಾಪುರ ಗ್ರಾಮ ಕೊರೊನಾ ಮುಕ್ತವಾಗಿದ್ದು, ಹರಿಹರ ತಾ.ಪಂ ಇಓ ಗಂಗಾಧರಪ್ಪ ಅವರ ಸೂಚನೆ ಮೇರೆಗೆ ಭಾನುವಾರ ಬೆಳಿಗ್ಗೆ ಗ್ರಾ.ಪಂ ಅಧ್ಯಕ್ಷೆ ಶ್ರೀಮತಿ ಕರಿಯಮ್ಮ, ಉಪಾಧ್ಯಕ್ಷ ಆನಂದಗೌಡ, ಗ್ರಾಮದ ಸದಸ್ಯ ಹನುಮಂತಪ್ಪ, ಪಿಡಿಓ ದಾಸರ ರವಿ, ಪೊಲೀಸ್ ಪೇದೆ ಮುರುಗೇಶ್ ಮತ್ತು ಗ್ರಾ.ಪಂ ಸಿಬ್ಬಂದಿ ವರ್ಗದವರು ಗ್ರಾಮಕ್ಕೆ ಭೇಟಿ ನೀಡಿದ್ದರು. ನಿಮ್ಮ ಗ್ರಾಮ ಕೊರೊನಾ ಮುಕ್ತವಾಗಿರುವುದರಿಂದ ಹೊರಗಡೆಯಿಂದ ಯಾವ ವ್ಯಕ್ತಿಗಳು ಗ್ರಾಮ ಪ್ರವೇಶಿಸದಂತೆ ನೋಡಿಕೊಳ್ಳಿ ಮತ್ತು ನೀವು ವಿನಾಕಾರಣ ಗ್ರಾಮದಿಂದ ಹೊರಗಡೆ ಹೋಗಬೇಡಿ. ಒಂದು ವೇಳೆ ಅನಿವಾರ್ಯವಾಗಿದ್ದರೆ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ ಎಂದು ಟಾಂ ಟಾಂ ಮೂಲಕ ಪ್ರಚಾರ ಮಾಡಲಾಯಿತು.

ಗ್ರಾಮ ಸಂಪರ್ಕಿಸುವ ಎಲ್ಲಾ ರಸ್ತೆಗಳನ್ನೂ ಬಂದ್ ಮಾಡಿ, ಸಂಪೂರ್ಣವಾಗಿ ಲಾಕ್ ಮಾಡಿದ್ದೇವೆ. ಕೃಷಿ ಕೆಲಸಗಳಿಗೆ ಅಡ್ಡಿಪಡಿಸಿಲ್ಲ ಎಂದು ಪಿಡಿಓ ದಾಸರ ರವಿ ಸ್ಪಷ್ಟಪಡಿಸಿದರು.

ಇದೇ ರೀತಿ ಕೊರೊನಾ ಮುಕ್ತವಾಗಿರುವ ಕೊಕ್ಕನೂರು ಗ್ರಾ.ಪಂ ವ್ಯಾಪ್ತಿಯ ಹಳ್ಳಿಹಾಳ್ ಕ್ಯಾಂಪ್, ಬೆಳ್ಳೂಡಿ ಗ್ರಾ.ಪಂ ವ್ಯಾಪ್ತಿಯ ಬ್ಯಾಲದಹಳ್ಳಿ, ಹನಗವಾಡಿ ಗ್ರಾ.ಪಂ ವ್ಯಾಪ್ತಿಯ ಕರಲಹಳ್ಳಿ ಗ್ರಾಮಗಳನ್ನೂ ಇಲ್ಲಿನ ಗ್ರಾ.ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪಿಡಿಓ ಅವರ ನೇತೃತ್ವದಲ್ಲಿ ಸೀಲ್‌ಡೌನ್ ಮಾಡಲಾಗಿದೆ ಎಂದು ಹೇಳಲಾಗಿದೆ.

# ಲಯನ್ಸ್‌ನಿಂದ 'ಆಕ್ಸಿಜನ್' ಸೇವಾ ಕಾರ್ಯ




ದಾವಣಗೆರೆ, ಮೇ 30- ಕೊರೊನಾ ಹಿನ್ನೆಲೆಯಲ್ಲಿ ಆಕ್ಸಿಜನ್ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸ್ಥಳೀಯ ಲಯನ್ಸ್ ಕ್ಲಬ್ ವತಿಯಿಂದ ಆಕ್ಸಿಜನ್ ಕಾನ್ಸಂಟ್ರೇಟರ್ ಗಳನ್ನು ಖರೀದಿಸಲಾಗಿದ್ದು, ಸಾರ್ವಜನಿಕರ ಸೇವೆಗೆ ಸಮರ್ಪಿಸಲಾಗಿದೆ.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಓಂಕಾರಪ್ಪ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಲಯನ್ಸ್ ಛೇರ್ಮನ್ ಬೆಳ್ಳೂಡಿ ಶಿವಕುಮಾರ್ ಅವರ ಮುಂದಾಳತ್ವದಲ್ಲಿ ಆಕ್ಸಿಜನ್ ಕಾನ್ಸಂ ಟ್ರೇಟರ್‌ನ ಸೇವಾ ಕಾರ್ಯಕ್ಕೆ ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ.ಬಿ.ಎಸ್.ನಾಗಪ್ರಕಾಶ್ ಅವರು ಸೇವಾ ಕಾರ್ಯಕ್ಕೆ ಚಾಲನೆ ನೀಡಿದರು.

ಲಯನ್ಸ್ ಟ್ರಸ್ಟ್ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಜಿಲ್ಲಾ ಲಯನ್ಸ್ ಚೇರ್ಮನ್ ಆರ್.ಜಿ ಶೀನಿವಾಸ ಮೂರ್ತಿ, ಲಯನ್ಸ್ ಹಿರಿಯ ಸದಸ್ಯರುಗಳಾದ ದೇವರಮನಿ ನಾಗರಾಜ್, ವೈ.ಬಿ.ಸತೀಶ್, ಎನ್.ಆರ್.ನಾಗಭೂಷಣ್ ರಾವ್, ನೀಲಿ ಉಮೇಶ್, ಕಣಕುಪ್ಪಿ ಮುರುಗೇಶಪ್ಪ, ಪಿ.ಸಿ.ಜಗದೀಶ್‌ಕುಮಾರ್, ಹೆಚ್.ಕೆ.ಹೇಮಣ್ಣ, ಕೆ.ಟಿ.ಮಹಾಲಿಂಗಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯದರ್ಶಿ ಕೋರಿ ಶಿವಕುಮಾರ್ ಸ್ವಾಗತಿಸಿ, ವಂದಿಸಿದರು. ತುರ್ತಾಗಿ ಆಕ್ಸಿಜನ್ ಬೇಕಾದವರು ಮೊ. 9341020397 ಅಥವಾ 9483619815ಕ್ಕೆ ಸಂಪರ್ಕಿಸುವಂತೆ ಲಯನ್ಸ್ ಕ್ಲಬ್ಬಿನ ವ್ಯವಸ್ಥಾಪಕ ನಾಗರಾಜ್ ತಿಳಿಸಿದ್ದಾರೆ.

# ಹೊನ್ನಾಳಿಗೆ ಇಂದು ಉಸ್ತುವಾರಿ ಸಚಿವ ಭೈರತಿ ಬಸವರಾಜ್

ನಗರಾಭಿವೃದ್ಧಿ ಖಾತೆ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಹೊನ್ನಾಳಿ ತಾ. ಪಂ. ಸಭಾಂಗಣದಲ್ಲಿ ಇಂದು ಮಧ್ಯಾಹ್ನ 3ಕ್ಕೆ ಏರ್ಪಾಡಾಗಿರುವ, ಹೊನ್ನಾಳಿ ತಾಲ್ಲೂಕಿನ ಕೋವಿಡ್ ಸೋಂಕಿತರ ಚಿಕಿತ್ಸೆಗೆ ನಿರ್ಮಿಸಿರುವ 50 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಚಿವರು ಪಾಲ್ಗೊಳ್ಳುವರು. ಸಂಜೆ 5 ಗಂಟೆಗೆ ದಾವಣಗೆರೆಗೆ ಆಗಮಿಸಿ, ವಾಸ್ತವ್ಯ ಮಾಡುವರು.

# ಕೊರೊನಾ : ನದಿಗೆ ಮೃತದೇಹ ಎಸೆದ ಇಬ್ಬರ ಬಂಧನ

ಬಲರಾಂಪುರ (ಉತ್ತರ ಪ್ರದೇಶ), ಮೇ 30 – ಕೊರೊನಾದಿಂದ ಸಾವನ್ನಪ್ಪಿದ ರೋಗಿಯ ಮೃತದೇಹವನ್ನು ನದಿಗೆ ಇಬ್ಬರು ಎಸೆಯುತ್ತಿದ್ದ ದೃಶ್ಯ ವಿಡಿಯೋದಲ್ಲಿ ಸೆರೆಯಾಗಿದ್ದು, ಘಟನೆಯ ನಂತರ ಅವರನ್ನು ಬಂಧಿಸಿದ ಘಟನೆ ಉತ್ತರ ಪ್ರದೇಶದ ಬಲರಾಂಪುರದಲ್ಲಿ ನಡೆದಿದೆ.

ನದಿ ಸೇತುವೆ ಮೇಲೆ ತೆರಳುತ್ತಿದ್ದ ಕೆಲವರು, ಪಿಪಿಇ ಕಿಟ್ ಧರಿಸಿ ವ್ಯಕ್ತಿ ಸೇರಿದಂತೆ ಇಬ್ಬರು ಮೃತದೇಹವನ್ನು ನದಿಗೆ ಎಸೆಯುತ್ತಿರುವ ದೃಶ್ಯ ಚಿತ್ರೀಕರಿಸಿದ್ದಾರೆ. ವಿಡಿಯೋ ಬಯಲಾದ ನಂತರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ ಎಂದು ಎ.ಎಸ್.ಪಿ. ಅರವಿಂದ ಮಿಶ್ರ ತಿಳಿಸಿದ್ದಾರೆ. ಮೃತದೇಹ ಎಸೆದ ವ್ಯಕ್ತಿಗಳನ್ನು ಮನೋಜ್ ಹಾಗೂ ಇನ್ನೋರ್ವನನ್ನು ಮೃತರ ಸಂಬಂಧಿ ಎಂದು ಗುರುತಿಸಲಾಗಿದೆ.

ಕೊರೊನಾ ನಿಯಮಗಳ ಪ್ರಕಾರ ಮೃತ ವ್ಯಕ್ತಿಯಾದ ಪ್ರೇಮ ನಾಥ ಮಿಶ್ರ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

# ರಾಜ್ಯದಲ್ಲಿ 20 ಸಾವಿರ ಕೊರೊನಾ ಸೋಂಕಿತರು ಪತ್ತೆ

ಬೆಂಗಳೂರು, ಮೇ 30 – ರಾಜ್ಯದಲ್ಲಿ ಭಾನುವಾರ 20,378 ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ ಹಾಗೂ ಇದೇ ದಿನ 382 ಜನ ಸಾವನ್ನಪ್ಪಿದ್ದಾರೆ ಎಂದು ರಾಜ್ಯ ಆರೋಗ್ಯ ಇಲಾಖೆ ತಿಳಿಸಿದೆ.

ಇದೇ ದಿನ 28,053 ಜನ ಗುಣವಾಗಿ ಬಿಡುಗಡೆಯಾಗಿದ್ದಾರೆ. ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 3.42 ಲಕ್ಷಕ್ಕೆ ಇಳಿದಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 4,373 ಸೋಂಕಿತರು ಕಂಡು ಬಂದಿದ್ದು, 213 ಜನ ಮೃತಪಟ್ಟಿದ್ದಾರೆ. ನಗರದಲ್ಲೀಗ 1.62 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ.

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಕೆಂಗೋ ಹನುಮಂತಪ್ಪ



ಶ್ರೀ ಶಂಭಣ್ಣ (ಕರಿಬಸಪ್ಪ)

ಶನಿವಾರ ನಿಧನರಾದ ದಾವಣಗೆರೆ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರು, ರಾಜ್ಯ ಸಂಘದ ನಿರ್ದೇಶಕರಾದ

**ಶ್ರೀ ಕೆಂಗೋ ಹನುಮಂತಪ್ಪ** ಅವರಿಗೂ ಮತ್ತು

ಯಕ್ಕನಹಳ್ಳಿ ಗ್ರಾಮದ ಬೀರಲಿಂಗೇಶ್ವರ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ


**ಶ್ರೀ ಶಂಭಣ್ಣ (ಕರಿಬಸಪ್ಪ)** ಅವರಿಗೂ

ಭಾವಪೂರ್ಣ ಶ್ರದ್ಧಾಂಜಲಿಗಳು.

**ಎಚ್.ಎ. ಉಮಾಪತಿ**
ಉಪಾಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗ, ದಾವಣಗೆರೆ ಜಿಲ್ಲಾ ಕುರುಬರ ಸಂಘದ ನಿರ್ದೇಶಕರು ಹಾಗೂ ಮಂಜುನಾಥ ರೈಸ್ ಮಿಲ್ ಮಾಲೀಕರು

**ರಂಜಿತ,** ಜಿಲ್ಲಾ ಕಾಂಗ್ರೆಸ್ ಯುವ ಕಾರ್ಯದರ್ಶಿ

# ಆಕ್ಸಿಜನ್ ರವಾನೆ ಸವಾಲನ್ನು ದಿಟ್ಟವಾಗಿ ಎದುರಿಸಿದ್ದೇವೆ : ಮೋದಿ



ನವದೆಹಲಿ, ಮೇ 30 – ಕೊರೊನಾ ಎರಡನೇ ಅಲೆಯಲ್ಲಿ ವೈದ್ಯಕೀಯ ಗುಣಮಟ್ಟದ ಆಕ್ಸಿಜನ್ ಅನ್ನು ದೇಶದ ಬೇರೆ ಬೇರೆ ರಾಜ್ಯಗಳಿಗೆ ತಲುಪಿಸುವುದು ಸವಾಲಿನದ್ದಾಗಿತ್ತು. ಆದರೆ, ವಾಯುಪಡೆ, ರೈಲ್ವೆ ಹಾಗೂ ಹಲವಾರು ಟ್ಯಾಂಕರ್ ಚಾಲಕರು ಅವಧಿ ಮೀರಿ ಕೆಲಸ ಮಾಡುವ ಮೂಲಕ ಆಕ್ಸಿಜನ್ ಅನ್ನು ಸಮಯಕ್ಕೆ ಸರಿಯಾಗಿ ತಲುಪಿಸಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ, ತಮ್ಮ ಸರ್ಕಾರ ಏಳು ವರ್ಷ ಪೂರೈಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್ ಎಂಬುದು ಸರ್ಕಾರದ ಮಂತ್ರವಾಗಿದೆ ಎಂದಿದ್ದಾರೆ. ಈ ಅವಧಿಯಲ್ಲಿ ರಾಷ್ಟ್ರೀಯ ಹೆಮ್ಮೆಯ ಹಲವು ಕ್ಷಣಗಳು ದೊರೆತಿವೆ. ಹಲವಾರು ಯಶಸ್ಸುಗಳ ಜೊತೆಗೆ ಕಠಿಣ ಪರೀಕ್ಷೆಗಳೂ ಎದುರಾಗಿವೆ ಎಂದಿರುವ ಪ್ರಧಾನಿ, ದೇಶ ಮೊದಲ ಅಲೆಯನ್ನು ದಿಟ್ಟವಾಗಿ ಎದುರಿಸಿತ್ತು. ಎರಡನೇ ಅಲೆಯನ್ನೂ ಸೋಲಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹಲವಾರು ನೈಸರ್ಗಿಕ ವಿಕೋಪಗಳನ್ನು ಪ್ರಸ್ತಾಪಿಸಿದ ಪ್ರಧಾನಿ, ಹಿಂದಿನ ದಿನಗಳಿಗೆ ಹೋಲಿಸಿದರೆ ಹೆಚ್ಚು ಜೀವಗಳನ್ನು ಉಳಿಸಲಾಗಿದೆ ಎಂದಿದ್ದಾರೆ.

ಜನರ ಸಂಕಷ್ಟ ನಿವಾರಿಸಲು ಕೇಂದ್ರ ಹಾಗೂ ರಾಜ್ಯಗಳು ಜೊತೆಯಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಮೋದಿ ಒತ್ತಿ ಹೇಳಿದ್ದಾರೆ.

ಆಕ್ಸಿಜನ್ ಪೂರೈಕೆಯಲ್ಲಿ ಭಾಗಿಯಾಗಿದ್ದ ದ್ರವ ಆಕ್ಸಿಜನ್ ಚಾಲಕರೊಬ್ಬರು, ಮಹಿಳಾ ರೈಲ್ವೆ ಚಾಲಕಿ ಹಾಗೂ ವಾಯುಪಡೆಯ ಅಧಿಕಾರಿ ಜೊತೆ ಪ್ರಧಾನಿ ಈ ಸಂದರ್ಭದಲ್ಲಿ ಮಾತನಾಡಿದರು. ಆಕ್ಸಿಜನ್ ಅನ್ನು ಸಮಯಕ್ಕೆ ಸರಿಯಾಗಿ ತಲುಪಿಸಲು ಇವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಪ್ರಧಾನಿ ವಿವರಿಸಿದರು.

ಸಾಮಾನ್ಯ ದಿನಗಳಲ್ಲಿ ದ್ರವ ಆಕ್ಸಿಜನ್ ಉತ್ಪಾದನೆ 900 ಮೆಟ್ರಿಕ್ ಟನ್ ಆಗಿದೆ. ಅದೀಗ ಹತ್ತು ಪಟ್ಟು ಹೆಚ್ಚಾಗಿ 9,500 ಮೆಟ್ರಿಕ್ ಟನ್‌ಗಳಿಗೆ ತಲುಪಿದೆ ಎಂದು ಮೋದಿ ಹೇಳಿದರು. ಕೊರೊನಾದ ಹೊರತಾಗಿಯೂ ರೈತರು ದಾಖಲೆ ಇಳುವರಿ ಪಡೆದಿದ್ದಾರೆ. ಸರ್ಕಾರ ದಾಖಲೆಯ ಪ್ರಮಾಣದಲ್ಲಿ ಧಾನ್ಯ ಖರೀದಿಸಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ರೈತರು ತಮ್ಮ ಇಳುವರಿ ಸಾಗಿಸಲು ಸರ್ಕಾರ ವ್ಯವಸ್ಥೆ ಮಾಡಿದೆ. ಕಿಸಾನ್ ರೈಲ್ ಮೂಲಕ ಇದುವರೆಗೂ 2 ಲಕ್ಷ ಟನ್ ಇಳುವರಿಯನ್ನು ಸಾಗಿಸಲಾಗಿದೆ. ಈಗ ರೈತರು ಹಣ್ಣು, ತರಕಾರಿ ಹಾಗೂ ಧಾನ್ಯಗಳನ್ನು ದೇಶದ ಯಾವುದೇ ದುರ್ಗಮ ಪ್ರದೇಶಗಳಿಗೆ ರವಾನಿಸಬಹುದು ಎಂದು ತಿಳಿಸಿದರು.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.05.2021ರ ಶುಕ್ರವಾರ ನಿಧನರಾದ ಮಂಜುನಾಥ ಇಂಡಸ್ಟ್ರೀಸ್ ಮಾಲೀಕರೂ ನಮ್ಮ ಸೊಸೈಟಿ ನಿರ್ದೇಶಕರೂ ಆದ ಶ್ರೀ ಬಿ.ರಮೇಶ್ ಅವರ ಪುತ್ರ


**ಶ್ರೀ ಬಿ.ಆರ್. ವಿಶ್ವನಾಥ್**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ, ಪಿಗ್ಮಿ ಸಂಗ್ರಹಕಾರರು ಹಾಗೂ ಸಂಘದ ಸರ್ವ ಸದಸ್ಯರು

**ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ**
'ಶಿವಗೌರಿ', ಮೊದಲನೇ ಮಹಡಿ, ಶ್ರೀ ಭೂತ ಚೌಡೇಶ್ವರಿ ದೇವಸ್ಥಾನದ ಹತ್ತಿರ, ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ-06.

## ಭಾವಪೂರ್ಣ ಶ್ರದ್ಧಾಂಜಲಿ



ಜನನ: 21.07.1964

ಮರಣ: 30.05.2021

**ಮಾಳಿಗೇರ ಎಂ. ಚಂದ್ರಶೇಖರಪ್ಪ** ಎಲೆಬೇತೂರು

ಶ್ರೀ ನಂದಿ ಸಿಂಡಿಕೇಟ್ ಅಡಿಕೆ ದಲ್ಲಾಲಿ ಅಂಗಡಿ ಪಾಲುದಾರರು, ಎ.ಪಿ.ಎಂ.ಸಿ. ಯಾರ್ಡ್, ದಾವಣಗೆರೆ.

ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ದಿ|| ಮಾಳಿಗೇರ ಮಲುಕಪ್ಪ ಮೇಷ್ಟ್ರು ಇವರ ದ್ವಿತೀಯ ಪುತ್ರ ಮಾಳಿಗೇರ ಎಂ. ಚಂದ್ರಶೇಖರಪ್ಪ (57 ವರ್ಷ) ಇವರು ದಿನಾಂಕ: 30.05.2021ನೇ ಭಾನುವಾರ ಮುಂಜಾನೆ 05:45 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಸ್ವಗ್ರಾಮದ ತೋಟದಲ್ಲಿ ಬೆಳಗ್ಗೆ 09:50 ಗಂಟೆಗೆ ನೆರವೇರಿಸಲಾಯಿತು.

ಇಂತಿ ದುಃಖತಪ್ತರು

**ಮಾಳಿಗೇರ ವಂಶಸ್ಥರು, ಎಲೆಬೇತೂರು.**

ಮೊ: 8088588490, 8277393775

## ಭಾವಪೂರ್ಣ ಶ್ರದ್ಧಾಂಜಲಿ



**ಇಂ|| ಜಿ.ಎನ್. ಸಿದ್ದಬಸಪ್ಪ**
ಬಿಎಸ್ಸಿ, ಬಿ.ಇ., ಎಂ.ಇ.,

ನಿಧನ : 16.05.2021

ಪ್ರೀತಿ-ವಾತ್ಸಲ್ಯ, ಸದಾ ಹೊಸ ಚಿಂತನೆ, ಪರಿಕಲ್ಪನೆ, ಧ್ಯೇಯ, ಉತ್ತಮ ಅಭಿರುಚಿ ಹಾಗೂ ಆತ್ಮವಿಶ್ವಾಸವನ್ನೊಳಗೊಂಡ ಬದುಕು ನಮಗೆ ಆದರ್ಶ.

- ಶ್ರೀಮತಿ ಸುಧಾ ಮತ್ತು ಡಾ|| ಸೋಮಶೇಖರ್ ಕೆ.ಎಸ್.
- ಶ್ರೀಮತಿ ಡಾ|| ಸಂಗೀತ ಮತ್ತು ಡಾ|| ಮಲ್ಲಿಕಾರ್ಜುನ ಗೌಡ ಕೆ.
- ಶ್ರೀಮತಿ ಸ್ಫೂರ್ತಿ ಮತ್ತು ಶ್ರೀ ಗಿರೀಶ್ ಸಿ.
- ಶ್ರೀಮತಿ ಡಾ|| ಕಾವೇರಿ ಮತ್ತು ಡಾ|| ಸಿದ್ದೇಶ್ ಎನ್. ಕಡೂರ್
- ಶ್ರೀಮತಿ ಸುಕನ್ಯಾ ಮತ್ತು ಡಾ|| ಬಸವರಾಜಪ್ಪ ಕೆ.ಎಸ್.
- ಶ್ರೀಮತಿ ಆಶಾ ಮತ್ತು ಶ್ರೀ ನಾಗರಾಜಪ್ಪ ಡಿ.ಕೆ.
- ಶ್ರೀಮತಿ ಬಿಂದು ಮತ್ತು ಶ್ರೀ ರವಿಶಂಕರ್ ಕೆ.ಎಸ್.
- ಶ್ರೀಮತಿ ಮಂಜುಳ ಮತ್ತು ಶ್ರೀ ಕರುಣಾಕರ ಜಿ.ಜೆ.
- ಶ್ರೀಮತಿ ಮಂಜುಳ ಮತ್ತು ಶ್ರೀ ಸಿದ್ದರಾಮಣ್ಣ ಎ.ಆರ್.
- ಶ್ರೀಮತಿ ವೀಣಾ ಮತ್ತು ಶ್ರೀ ದೇವರಾಜ್ ಜಿ.ಬಿ.
- ಶ್ರೀಮತಿ ಸುವರ್ಣಮ್ಮ ಮತ್ತು ಶ್ರೀ ಬಸವಲಿಂಗಪ್ಪ ಜಿ.
- ಶ್ರೀಮತಿ ಸುಮಾ ಮತ್ತು ಶ್ರೀ ಬಸವರಾಜ್ ಜಿ.ಸಿ.
- ಮಳಲ್ಕೆರೆ ಗ್ರಾಮಸ್ಥರು ಮತ್ತು ಗುಡ್ಡದಾರ ವಂಶಸ್ಥರು, ಮಳಲ್ಕೆರೆ ಬಂಧುಗಳು ಮತ್ತು ಮಿತ್ರರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte